(ii) re : Scarcity of Kerosene in Several Parts of the State.

Sri M. H. JAYAPRAKASH NARAYAN (Sirsi).—

I call the attention of the Hon. Minister for Food and Forest to the acute scarcity of kerosene in several parts of the State.

Sri K. H. PATIL (Minister for Food and Forests).—

In reply to the above calling Attention Notice I state as follows :—

1973ನೇ ಜನವರಿಯಿಂದ 15171 ಮೆಟ್ರಿಕ್ ಟನ್‌ಗಳಷ್ಟು ಸೀಮೆ ಎಣ್ಣೆ ಸರಬರಾಜು ಆಗುತ್ತಿದ್ದು, ಕ್ರಮೇಣ ಕಮ್ಮಿಯಾಗುತ್ತಾ ಬಂದು ಇದೇ ವರ್ಷ 1974ನೇ ಜನವರಿ ತಿಂಗಳಲ್ಲಿ 9,619 ಮೆಟ್ರಿಕ್ ಟನ್‌ಗಳಷ್ಟು ಸರಬರಾಜಾಗಿದೆ.

2. ಅಂತರರಾಷ್ಟ್ರೀಯ ತೈಲವಾರುಕಟ್ಟೆಯಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದ ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಆಗುವ ಸರಬರಾಜನ್ನು ಖೋತಾ ಮಾಡಿ, ಇದರಿಂದ ಉಂಟಾಗಿರುವ ಪರಿಸ್ಥಿತಿಯನ್ನು ವಿವರಿಸಿ, ಸದ್ಯ ಸರಬರಾಜು ಆಗುತ್ತಿರುವ ಪ್ರಮಾಣವನ್ನು ಸೂಕ್ತ ರೀತಿಯಲ್ಲಿ ವಿತರಣೆಮಾಡಲು ಆದೇಶ ನೀಡಲಾಗಿದೆ. ಇದೇ ಪ್ರಕಾರವಾಗಿ ಜಿಲ್ಲಾಧಿಕಾರಿಗಳಿಗೆ ಸೀಮೆ ಎಣ್ಣೆಯ ವಿತರಣೆ ಬಗ್ಗೆ ಆದೇಶ ನೀಡಲಾಗಿದೆ. ಜಿಲ್ಲಾಧ್ಯಂತ ವಿತರಣೆ ವ್ಯವಸ್ಥೆಯು ಜಿಲ್ಲಾಧಿಕಾರಿಗಳಿಗೆ ಸೇರಿದ್ದು ಆ ಬಗ್ಗೆ ಇಮವರೆಗೆ ದೂರುಗಳು ಬಂದಿರುವುದಿಲ್ಲ. ನ್ಯೂನತೆ ಕಂಡು ಬಂದ ಪ್ರಕರಣಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸಹ ಆದೇಶ ನೀಡಲಾಗಿದೆ.

3. ರಾಜ್ಯಕ್ಕೆ ಸಾಕಷ್ಟು ಪ್ರಮಾಣದಲ್ಲಿ ಸೀಮೆ ಎಣ್ಣೆ ಸರಬರಾಜು ಮಾಡುವ ಭಾರ ಕೇಂದ್ರ ಸರಕಾರದ ಮೇಲಿದ್ದು ಜಾಸ್ತಿ ಪ್ರಮಾಣದಲ್ಲಿ ಸೀಮೆ ಎಣ್ಣೆ ಸರಬರಾಜು ಮಾಡಲು ಕೇಂದ್ರ ಸರ್ಕಾರವನ್ನು ಈಗಾಗಲೆಕೇಳಿಕೊಳ್ಳಲಾಯಿತು. ಒತ್ತಾಯ ಮಾಡಲಾಗಿದೆ. ಅದೇ ಪ್ರಕಾರ ಮಾರ್ಚ್ ತಿಂಗಳ ಹಂಚಿಕೆ ಪ್ರಮಾಣದಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಿಸಿರುವುದರಿಂದಲೂ (10771 ಮೆಟ್ರಿಕ್ ಟನ್) ಈಗತಾನೆ ಕೇಳಿದ ಸರಕಾರದಿಂದ ಬಂದಿರುವ ಆದೇಶವು ಈಗ ಮುಟ್ಟಿರುವುದರಿಂದ ಜಿಲ್ಲಾಧಿಕಾರಿಗಳಿಗೆ ಹಳ್ಳಿಗಳಲ್ಲಿ ಸೂಕ್ತ ಕ್ರಮದಲ್ಲಿ ಸೀಮೆ ಎಣ್ಣೆಯ ವಿತರಣೆಯು ವ್ಯವಸ್ಥೆ ಮಾಡಬೇಕೆಂದು ಆಹಾರ ಮತ್ತು ನಾಗರಿಕ ಪೂರೈಕೆಯ ನಿರ್ದೇಶಕರು ಆದೇಶ ಕಳುಹಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿರುವುದು.

4. ದಕ್ಷಿಣ ಕರ್ನಾಟಕಕ್ಕೆ ಮಾರ್ಚ್ ತಿಂಗಳಲ್ಲಿ ಹಂಚಿಕೆಯಾಗಿರುವ ಸೀಮೆ ಎಣ್ಣೆಯ ಪ್ರಮಾಣದ ಇತ್ತೀಚಿನ ಅಕೆಅಂಶದ ಪ್ರಕಾರ ಕಳೆದ ತಿಂಗಳಿಗೆ ಹೋಲಿಸಿದ್ದಲ್ಲಿ 3800 ಕಿಲೋ ಲೀಟರ್‌ಗಳಷ್ಟು ಸೀಮೆ ಎಣ್ಣೆಯನ್ನು ಜಾಸ್ತಿಯಾಗಿ ಪಡೆಯಲಾಗಿದೆ. ಸೀಮೆ ಎಣ್ಣೆಯು ಮದ್ರಾಸಿನಿಂದ ಸುಲಭವಾಗಿ ಸರಬರಾಜಾದುದರಿಂದಲೂ, ಕೊಚ್ಚಿನ್‌ನಿಂದ ಪುನಃ ಸರಬರಾಜನ್ನು ಮುಂದುವರಿಸಿದುದರಿಂದಲೂ ಸತತ ಸರ್ಕಾರದವರು ಹೆಚ್ಚಿನ ಹಂಚಿಕೆಯನ್ನು ಪಡೆಯಲು ಸತತ ಪ್ರಯತ್ನ ಮಾಡಿದುದರಿಂದಲೂ ಸೀಮೆ ಎಣ್ಣೆಯ ಸರಬರಾಜಿನ ಪರಿಸ್ಥಿತಿ ನಿರ್ಧಾರಿಸುತ್ತದೆ. ತತ್ಪರಿಣಾಮವಾಗಿ ದಕ್ಷಿಣ ಕನ್ನಡ, ಹಾಸನ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಕಳೆದ ತಿಂಗಳಲ್ಲಿ ಕಂಡು ಬಂದಂಥ ಅಭಾವ ಪರಿಸ್ಥಿತಿಯು ತಿಂಗಳಲ್ಲಿ ಬರುವ ಸಂಭವವಿಲ್ಲ. ವಾಸ್ತವಿಕವಾಗಿ ಬೆಂಗಳೂರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಕಳೆದ ತಿಂಗಳಲ್ಲಿ ನಾವು ಯಾವ ಯಾವ ನಿರ್ಧಾರಗಳನ್ನು ಮತ್ತು ಸೂಕ್ತ ಕ್ರಮಗಳನ್ನು ವಿಧಿಸಿದ್ದೆವೋ ಅವುಗಳನ್ನು ಸಡಿಲಗೊಳಿಸಲು ಈಗಾಗಲೇ ಆಜ್ಞೆ ಮಾಡಿದ್ದೇವೆ. ಇನ್ನು ಮೇಲೆ ಸೀಮೆ ಎಣ್ಣೆ ಮಾರುವವರು ನ್ಯಾಯಬೆಲೆಯ ಅಂಗಡಿಯ ಮುಂದೆಯೇ ಮಾರಲು ಯಥಾ ಪ್ರಕಾರ ಬೀದಿ ಬದಿಯಲ್ಲಿ ಮಾರುವಂತೆ ವ್ಯವಸ್ಥೆ ಮಾಡಲಾಗಿದೆ.

. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಹಾರ ಸಲಹಾ ಸಮಿತಿಗಳವರು ಸೀಮೆ ಎಣ್ಣೆಯನ್ನು ಸಮರ್ಪಕ ರೀತಿಯಲ್ಲಿ ಹಂಚುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಹಾಯ ಮಾಡುವರೆಂದು ನಂಬಿದ್ದೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ತಾವು ಕೊಟ್ಟ ಹೇಳಿಕೆಯ ಪ್ರಕಾರ ಪಟ್ಟಣದ ಸೀಮೆಎಣ್ಣೆಯ ವಿತರಣೆ ಚೆನ್ನಾಗಿದ್ದು ಗ್ರಾಮಾಂತರ ಪ್ರದೇಶಗಳಲ್ಲಿ ಇದರ ಅಭಾವ ಹೆಚ್ಚಾಗಿದ್ದು ಒಂದಕ್ಕೆ ಎರಡರಷ್ಟು ಬೆಲೆ ಕೊಡಬೇಕಾಗುತ್ತದೆ. ಇದನ್ನು ತಾವು ವಿಚಾರ ಮಾಡಿ ಎಲ್ಲಾ ತಾಸೀಲ್ದಾರರುಗಳಿಂದ ವರದಿ ತರಿಸಿಕೊಂಡು ಜಾಗ್ರತೆ ಇದನ್ನು ಸರಿಪಡಿಸಿ ಬಡ ಜನರಿಗೆ ನಿಗದಿಯಂದ ಬೆಲೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಿಗುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಅನುಮೋದಿಸಿದರೂ ತಾಹಸೀಲ್ದಾರರುಗಳಿಂದ ವರದಿ ಕೇಳಿದರೆ ಅವರು ಬ್ಲಾಕ್ ಮಾರ್ಕೆಟ್ಟಿನಲ್ಲಿ ನಡೆಯುತ್ತಿದೆ ಎಂದು ವರದಿ ಕಳಿಸುವುದಿಲ್ಲ. ಎಲ್ಲೆಲ್ಲಿ ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದಾರೆ, ಅವರಿಂದ ಸಾರ್ವಜನಿಕರು ಕೊಂಡುಕೊಳ್ಳದೆ, ಅಂಥ ವಿಚಾರಗಳನ್ನು ನಮ್ಮ ಗಮನಕ್ಕೆ ತಂದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ನಾನು ಹೇಳಿದಂತೆ ಈಗಾಗಲೇ ಸೀಮೆ ಎಣ್ಣೆ ಪರಿಸ್ಥಿತಿ ಸುಧಾರಿಸಿದೆ. ತಾವು ಕೇಳುವಷ್ಟು ಪ್ರಮಾಣದಲ್ಲಿ ಹಳ್ಳಿಗಾಡುಗಳಿಗೆ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ, ಈಗ ಕೊಡುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೊಡುವ ಸ್ಥಿತಿಯಲ್ಲಿ ನಾವು ಇದ್ದೇವೆ.

ಶ್ರೀ ಬಿ. ವಿ. ಕಕ್ಕೇರಾಯ.—ನಗರಗಳಲ್ಲಿ ಎಲೆಕ್ಟ್ರಿಸಿಟಿ ಇರುವ ಕಡೆಯೂ ಮೂರು ಲೀಟರ್ ಕೊಡುತ್ತೀರಿ. ಆದರೆ ಹಳ್ಳಿಗಳಲ್ಲಿ ಕೇವಲ ಒಂದು ಲೀಟರ್ ಕೊಡುತ್ತಿದ್ದೀರಿ. ಇದನ್ನು ಬದಲಾವಣೆ ಮಾಡಿ ಹಳ್ಳಿಯ ಜನರಿಗೆ ಜಾಸ್ತಿ ದೊರೆಯುವಂತೆ ವ್ಯವಸ್ಥೆ ಮಾಡುತ್ತೀರಾ; ಮತ್ತು ನಮ್ಮ ಕಡೆ ಸೀಮೆ ಎಣ್ಣೆಯನ್ನು ಡೆಪ್ಯುಟಿ ಕಮಿಷನರವರ ಆದೇಶದ ಮೇರೆಗೆ ತಾಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ವ್ಯಾಪಾರಸ್ಥರುಗಳಿಗೆ ತಂದುಕೊಟ್ಟರೂ ಸಹ ವ್ಯಾಪಾರಸ್ಥರು ಅದನ್ನು ನಮ್ಮ ಇಷ್ಟಾನುಸಾರ ಮಾರುವುದಕ್ಕೆ ಅವಕಾಶ ಕೊಡಬೇಕೇ ವಿನಹ ಬಿಲ್ಲು ಕೊಟ್ಟು ಮಾರಲು ಒತ್ತಾಯ ಮಾಡುವುದಾದರೆ, ನಾವು ಮಾರುವುದಕ್ಕೆ ತಯಾರಾಗಿಲ್ಲವೆಂದು ಬಂದಂತಹ ಲಾರಿ ಲೋಡ್ ಎಣ್ಣೆಯನ್ನು ವಾಪಸ್ಸು ಕಳಿಸುತ್ತಿದ್ದಾರೆ. ಆದ್ದರಿಂದ ಅಂಥ ವ್ಯಾಪಾರಸ್ಥರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಂಡು ಇದನ್ನು ಕೋ ಆಪರೇಟಿವ್ ಸೊಸೈಟಿ ಅಥವಾ ತಮ್ಮ ಸಿಬ್ಬಂದಿ ಮೂಲಕವಾಗಲಿ ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ಮೊದಲನೆಯದಾಗಿ ಸಿಟಿಯಲ್ಲಿ ಹೆಚ್ಚು ಕೊಟ್ಟು ಹಳ್ಳಿಗಳಲ್ಲಿ ಕಡಿಮೆ ಕೊಡುತ್ತೀರಿ ಎಂದು ಹೇಳಿದರು. ಹಳ್ಳಿಯವರಿಗೆ ಇನ್ನೂ ಹೆಚ್ಚಿನ ಸೌಕರ್ಯವನ್ನು ಕೊಡುವ ಸ್ಥಿತಿಗೆ ನಾವು ಇನ್ನೂ ಬಂದಿಲ್ಲ. ಸಿಟಿಗಳಲ್ಲಿ ಏಕೆ ಕೊಡುತ್ತಿದ್ದೇವೆ ಅಂದರೆ, ಹೆಚ್ಚು ಜನರು ಸೀಮೆ ಎಣ್ಣೆ ಸ್ಟೌವ್ ಇಟ್ಟುಕೊಂಡು ಅಡಿಗೆ ಮಾಡುತ್ತಿದ್ದಾರೆ. ಅಂಥವರಿಗೆ ಹೆಚ್ಚು ಬೇಕಾಗುತ್ತದೆ. ಸಿಟಿಯಲ್ಲಿ ಸೀಮೆ ಎಣ್ಣೆಯನ್ನು ಉಪಯೋಗಿಸುವವರು ಜಾಸ್ತಿ ಜನ ಇರುತ್ತಾರೆ. ಹಳ್ಳಿಯವರಿಗೆ ಇಷ್ಟರವರೆಗೆ ಕಡಿಮೆ ಕೊಟ್ಟು ಅವರಿಗೆ ಏನು ತೊಂದರೆಯಾಗುತ್ತಿದೆ, ಅದನ್ನು ಕಡಿಮೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಎರಡನೆಯದಾಗಿ ವ್ಯಾಪಾರಸ್ಥರು ಸೀಮೆ ಎಣ್ಣೆಯನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಬೇಡಿ ಅದನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಾರೆ, ಇದರಿಂದ ನಿಜವಾಗಿ ಹೋಲ್‌ಸೇಲ್ ಡೀಲರ್ಸ್ ಕಾನೂನ್ನು ಉಲ್ಲಂಘಿಸಿದಂತಾಗುತ್ತದೆಂದು ಹೇಳುತ್ತಿದ್ದೀರಿ, ಅಂತಹ ಕೇಸುಗಳನ್ನು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಪಟ್ಟಣಗಳಿಗೆ ಸಾಕಾದಷ್ಟು ಪ್ರಮಾಣದಲ್ಲಿ ವ್ಯವಸ್ಥಿತ ರೀತಿಯಲ್ಲಿ ಸೀಮೆಯೆಣ್ಣೆಯನ್ನು ಹಂಚಿಕೆ ಮಾಡಲು ವ್ಯವಸ್ಥೆ ಮಾಡಿದ್ದೀರಿ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಗಂಟೆಗಳ ತನಕ ವಿದ್ಯುಚ್ಛಕ್ತಿ ಸೌಕರ್ಯ ಇರುವುದೇ ಇಲ್ಲ. ಅಲ್ಲಿ ಅನೇಕ ವಿಧವಾದಂಥ ತೊಂದರೆಗಳು ಬರುತ್ತವೆ. ಅಲ್ಲಿ ಅವರಿಗೆ ಸಾಕಾದಷ್ಟು ಪ್ರಮಾಣದಲ್ಲಾ ಇದು ಸಿಗುತ್ತಾ ಇಲ್ಲ. ವ್ಯವಸ್ಥಿತವಾದ ರೀತಿಯಲ್ಲಿ ಜನರಿಗೆ ಅಲ್ಲಾ ಇದು ದೊರೆಯುತ್ತಿಲ್ಲ. ಈ ರೀತಿಯಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸೀಮೆಯೆಣ್ಣೆ ಸಾಕಷ್ಟು ಸಿಗದೇ ಇರುವುದರಿಂದ ಒಂದೊಂದು ಕಾಲಕ್ಕೆ ಊಟ ಮಾಡುವುದಕ್ಕೆ ಬೆಳಕು ಇರುವುದಿಲ್ಲ. ದೀಪ ಉಂಟಿಸುವುದಕ್ಕೆ ಸಾಕಷ್ಟು ಸೀಮೆಯೆಣ್ಣೆ ಸಿಗುತ್ತಿಲ್ಲ. ಬೆಂಕಿ ಬೆಳಕಿನಲ್ಲಿ ಎಷ್ಟೋ ಸಾರಿ ಊಟ ಮಾಡುವ ಪರಿಸ್ಥಿತಿ ಬಂದಿದೆ ದೀಪ ಇಲ್ಲದೆ ಅಲ್ಲಿನ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಒಂದು ಲೀಟರಿಗೆ 2—½ ರೂಪಾಯಿಗಳಂತೆ ಅದನ್ನು ಮಾರುತ್ತಿದ್ದಾರೆ. ಒಂದು ಡಬ್ಬಕ್ಕೆ ಸುಮಾರು 30 ರೂಪಾಯಿಗಳಂತೆ ಮಾರಾಟ ಮಾಡುತ್ತಿದ್ದಾರೆ. ಇಷ್ಟೊಂದು ಹೆಚ್ಚಿನ ದರದಲ್ಲಿ ಸೀಮೆಯೆಣ್ಣೆಯನ್ನು ಓಪನ್ ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದರೂ ಅಲ್ಲಿರತಕ್ಕ ಅಧಿಕಾರಿಗಳು ಏನೂ ಮಾಡುತ್ತಿಲ್ಲ. ಸುಮ್ಮನೆ ಇರತ್ತಾರೆ. ಅನೇಕ ಸಂದರ್ಭಗಳಲ್ಲಿ ಅಲ್ಲಿರುವ ಮಾರಾಟಗಾರರು ಮತ್ತು ನಿಮ್ಮ ಇಲಾಖಾಧಿಕಾರಿಗಳು ಒಂದಾಗಿ ಸೇರಿಕೊಂಡು ಇದರ ರೇಟನ್ನು ಜಾಸ್ತಿ ಮಾಡಿ ಅದರಿಂದ ಬಂದ ಲಾಭವನ್ನು ಆಮೇಲೆ ಎಲ್ಲರೂ ಹಂಚಿಕೊಳ್ಳುತ್ತಾರೆಂದು ನಾನು ಈಗ ವಿಧಿ ಇಲ್ಲದೆ ಹೇಳಬೇಕಾಗಿದೆ. ಆದ್ದರಿಂದ ಸೀಮೆಯೆಣ್ಣೆಯನ್ನು ಇನ್ನು ಮುಂದೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿಯೂ ಪಟ್ಟಣಗಳಲ್ಲಿ ಹಂಚುವ ಹಾಗೆ ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಹಂಚುವ ಹಾಗೆ ಹಾಗೂ ಸುಲಭ ಬೆಲೆಗೆ ಅದು ಸಿಗುವ ಹಾಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಒಂದು ಮಾತನ್ನು ಕೇಳಬೇಕು. ಹಳ್ಳಿಯಲ್ಲಿ ಷಹರ್‌ನಲ್ಲಿ ಸಿಗುವ ಹಾಗೆ ಸೀಮೆಯೆಣ್ಣೆ ಸಿಗುತ್ತಾ ಇಲ್ಲವೆಂದು ಹೇಳುತ್ತಿದ್ದಾರೆ. ಇನ್ನು ಕೆಲವರು ಸಕ್ಕರೆ ಸರಿಯಾಗಿ ಹಂಚಿಕೆಯಾಗುತ್ತಾ ಇಲ್ಲವೆಂದು ಹೇಳುತ್ತಾರೆ. ನನಗೆ ತಿಳಿದು ಬಂದಿರುವ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಸಂದರ್ಭಗಳಲ್ಲಿ ಸೀಮೆಯೆಣ್ಣೆ ಸುಲಭವಾಗಿ ಸಿಗುತ್ತಿಲ್ಲ ವೆಂಬುದು ನಿಜ. ಆದರೆ ಈ ಒಂದು ವ್ಯತ್ಯಾಸ ಮೊದಲು ಹೋಗಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಬಡ ಜನರು ಎಲ್ಲಿ ಇರುವುದರಿಂದ ಅಷ್ಟು ದುಡ್ಡು ಕೊಟ್ಟು ಅದನ್ನು ತರುವುದಕ್ಕಾಗುವುದಿಲ್ಲ. ಅವರಿಗೆ ಬಹಳ ಖರ್ಚಿನ ತೊಂದರೆಯಾಗುತ್ತದೆ. ಅದನ್ನು ಸರಿಯಾಗಿ ವಿತರಣೆ ಮಾಡುವುದಕ್ಕೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕು. ಎಷ್ಟೋ ಸಾರಿ ಗ್ರಾಮಗಳಲ್ಲಿ ದೀಪಕ್ಕೆ ಹಚ್ಚುವುದಕ್ಕೆ ಸೀಮೆಯೆಣ್ಣೆ ಇರುವುದಿಲ್ಲ. ಪಟ್ಟಣಗಳಲ್ಲಿ ಉಪಯೋಗಿಸುವ ಹಾಗೆ ಗ್ರಾಮಗಳಲ್ಲಿ ಹೆಚ್ಚಿಗೆ ಸ್ಟೌವ್ ಉಪಯೋಗಿಸುತ್ತಾ ಇಲ್ಲ. ಅವರು ಅದಕ್ಕೋಸ್ಕರ ಹೆಚ್ಚಿಗೆ ತೆಗೆದುಕೊಳ್ಳುವುದೂ ಇಲ್ಲ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಸರಿಯಾದ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಅಧಿಕಾರಿಗಳು ವ್ಯಾಪಾರಸ್ಥರ ಜೊತೆಯಲ್ಲಿ ಸೇರಿಕೊಂಡು ಲಾಭ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು ಸ್ವತಃಸಿದ್ಧವಾಗಿ ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುತ್ತೇನೆ. ಒಂದು ವೇಳೆ ಯಾರಾದರೂ ಅಧಿಕಾರಿಯಾಗಿರುವವರು ಆ ರೀತಿ ವ್ಯಾಪಾರಸ್ಥರೊಡನೆ ಶಾಮೀಲಾಗಿ ಲಾಭ ಗಳಿಸುತ್ತಿದ್ದರೆ, ಅಂತಹ ನಿದರ್ಶನವನ್ನು ಖಚಿತವಾಗಿ ನನಗೆ ಕಾಗದದ ಮೂಲಕ ರಹಸ್ಯವಾಗಿ ಬರೆದು ಕಳುಹಿಸಿದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಎಲ್ಲಾ ಕಡೆಯೂ ಮಂತ್ರಿಗಳೇ ಹೋಗಿ ನೋಡಿ ಮಾಡಬೇಕೆಂದು ಹೇಳಿದರೆ, ಅದು ಆಗುವುದಿಲ್ಲ. ಅಂಥಾದ್ದನ್ನು ಬಂದ್ ಮಾಡುವುದಕ್ಕೆ ನಾವೂ ನೀವೂ ಪ್ರಯತ್ನ ಮಾಡೋಣ.

ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಮಂತ್ರಿಗಳು ಎಲ್ಲವನ್ನೂ ನಾನೇ ನೋಡುವುದಕ್ಕಾಗುವುದಿಲ್ಲವೆಂದು ಹೇಳಿದರು, ಸೀಮೆಯೆಣ್ಣೆ ಜನವರಿ 1973 ರಿಂದ ಜನವರಿ 1974 ರವರೆಗೆ ಬೇಕಾದಷ್ಟು ಸ್ಟಾಕ್ ಬಂದಿದೆಯೆಂದು ಹೇಳುತ್ತಾರೆ. ಐ. ಒ. ಸಿ. ಯವರೊಡನೆ ಇವರು ವ್ಯವಹಾರ ಮಾಡಿ ಬೆಂಗಳೂರು ಸಿಟಿಯೊಳಗೆ ತಮಗೆ ಬೇಕಾದವರಿಗೆ ಸೇಕಡ 40 ರಷ್ಟು ಹಂಚಿರುತ್ತಾರೆ. ಇತರ ಭಾಗಗಳಲ್ಲಿಯೂ ಅದನ್ನು ಹಂಚಿಕೆ ಇರುವುದರಿಂದ ಇಷ್ಟು ಬೊಬ್ಬಾಟಕ್ಕೆ ಕಾರಣವಾಯಿತು. ಇದು ಸರಿಯೇ?

ಶ್ರೀ ಕೆ. ಎಚ್. ಪಾಟೀಲ್.—ಹಾಗೆ ಯಾರಿಗೂ ಸೀಮೆ ಎಣ್ಣೆ ಕೊಡಲಿಕ್ಕೆ ಬರುವುದಿಲ್ಲ. ಬಡವರಿಗೆ ಇದನ್ನು ಸರಿಯಾಗಿ ವಿತರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಬ್ಬ ಡೀಲರ್ ಇಷ್ಟೇ ಪ್ರಮಾಣವನ್ನು ಹಂಚಬೇಕೆಂದು ಗೊತ್ತು ಮಾಡುತ್ತೇವೆ. ಅವನು ಅದೇ ರೀತಿಯಲ್ಲಿ ಹಂಚಬೇಕು. ಅವನಿಗೆ ಬೇಕಾದ ಹಾಗೆ ಹಂಚುವುದಕ್ಕಾಗುವುದಿಲ್ಲ. ಅದು ಯಾವನಲ್ಲಿದ್ದರೂ ಅದು ಬಡವರಿಗೇ ಹಂಚಿಕೆಯಾಗುವ ಹಾಗೆ ವ್ಯವಸ್ಥೆ ಮಾಡಿದ್ದೇವೆ. ಅದೂ ಅಲ್ಲದೆ ಅದು ಹಾಕರ್ಸ್ ಮುಖಾಂತರ ಹಾಗೂ ರೀಟೇಲರ್ಸ್ ಮುಖಾಂತರ ಕನ್ಸ್ಯೂಮರ್ಸ್‌ಗೆ ಹೋಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸೀಮೆಯೆಣ್ಣೆಯನ್ನು ಎಲ್ಲರಿಗೂ ಸಮಾನವಾಗಿ ಕೊಡಬೇಕೆ ಇರುವುದರಿಂದ, ತಾವು ರಾಜೀನಾಮೆ ಕೊಡಬೇಕಾಗಿದೆ. ಏಕೆಂದರೆ ಹಳ್ಳಿಯವರನ್ನು ಈ ಒಂದು ವಿಚಾರದಲ್ಲಿ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದೀರಿ. ಸೀಮೆಯೆಣ್ಣೆಯನ್ನು ಸಾಕಾದಷ್ಟು ಹಳ್ಳಿಯವರಿಗೆ ಕೊಡುವುದಕ್ಕೆ ಯೋಗ್ಯತೆ ಇಲ್ಲದ ಸರ್ಕಾರದಲ್ಲಿ ತಾವು ಅದರ ಬಗ್ಗೆ ಜವಾಬ್ದಾರಿಯನ್ನು ಹೊತ್ತವರು ಏಕೆ ರಾಜೀನಾಮೆಯನ್ನು ಕೊಡಬಾರದು?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ನಾನು ರಾಜೀನಾಮೆ ಕೊಡುವ ಪ್ರಶ್ನೆ ಇದಲ್ಲ. ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಇಲ್ಲಿಗೆ ಬಂದರೂ ಇದಕ್ಕಿಂತಲೂ ಹೆಚ್ಚಿಗೆ ಕೊಡುತ್ತಾರೆಂದು ಯಾರೂ ಯೋಚಿಸಿಲ್ಲ. ಅದನ್ನು ಮುಂದೆ ನೋಡೋಣ.

ಶ್ರೀ ಬಿ. ಪಟ್ಟಸ್ವಾಮಯ್ಯ.—ಈಗ ಸೀಮೆಯೆಣ್ಣೆಗೆ ನೀರನ್ನು ಬೆರೆಸಿ ಮಾರಾಟ ಮಾಡುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಪೆಟ್ರೋಲಿಗೂ ನೀರು ಬೆರೆಸಿ ಮಾರುತ್ತಿದ್ದಾರೆ. ಇಂತಹ ಕಲಬೆರಿಕೆಯನ್ನು ತಪ್ಪಿಸುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದೀರಿ? ಇಂತಹ ಒಂದು ಕಲಬೆರಿಕೆಯಿಂದ ಅನೇಕರಿಗೆ ಲುಕ್ಸಾನು ಆಗುತ್ತಿರುವುದರಿಂದ ಈ ವಿಚಾರದಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ್.—ನಾನು ಈಗಾಗಲೇ ಹೇಳಿದ್ದೇನೆ. ನೀರು ಬೆರಕೆ ಮಾಡಿದ್ದಾರೆಂಬುದು ಕಂಡುಬಂದ ಪ್ರಸಂಗದಲ್ಲಿ ಅವರಿಗೆ ಲೈಸೆನ್ಸ್ ರದ್ದು ಮಾಡಲಾಗುತ್ತದೆ. ನುಮಾರು 40—50 ಜನ ಹೆಣ್ಣುಮಕ್ಕಳು ನನ್ನಲ್ಲಿಯೇ ಬಂದು ನರಿಯಾಗಿ ನೀಮೆಯೆಣ್ಣೆ ನರಬರಾಜು ಈಗ ಆಗುತ್ತಾ ಇಲ್ಲವೆಂದು ಹೇಳಿದ್ದಾರೆ. ಮತ್ತೆ ಕೆಲವರು ಬಂದು ಈಗ ಮಾತ್ರ ನರಿಯಾಗಿ ವಿತರಣೆ ಯಾಗುತ್ತಿದೆಯೆಂದೂ ಹೇಳಿದ್ದಾರೆ. ಆದ್ದರಿಂದ ಈ ವಿಚಾರವನ್ನು ನಾನು ಒಪ್ಪುವುದಿಲ್ಲ. ಆದರೆ ಅದನ್ನು ವಿಚಾರ ಮಾಡುವುದಕ್ಕೆ ಪೂರ್ವಭಾವಿಯಾಗಿ ತಿರಸ್ಕಾರ ಕೂಡ ಮಾಡುವುದಿಲ್ಲ. ಇದನ್ನು ಯಾವ ರೀತಿಯಲ್ಲಿ ಕಲಬೆರಕೆ ಮಾಡುವದನ್ನು ಬಂದ್ ಮಾಡುವುದಕ್ಕಾಗುತ್ತದೋ ಅದನ್ನು ಯೋಚಿಸಿ ಅದರ ಪ್ರಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(iii) re : harassment of workers by police in Kalinadi Project

Sri M. S. KRISHNAN (Malleswaram).—

I call the attention of the Chief Minister to the aalleged harassment of workers by the Police in Kalinadi Project.

Sri H. M. CHANNABASAPPA (Minister for Public Works and Electricity).—Sir on behalf of the Hon. Chief Minister, I make the following statement ;

About 175 Lambani Labourers including men and women were working under Contractor S. G. Hiremath and N. A. Naik at Ambga Sykes Point. On 24th January 1974 one Lambani woman while taking water from water tap was insulted by Malabari labourers. This matter was amicably settled between Lambanies and Malabaries and they were suitably advised. Due to this decision and subsequent unwillingness of lambani workers to be members of labour Union of N. R. K. Murthy, a Labour Leader, the Malabari Labour leader Divakar and 18 others formed themselves into an unlawful assembly and trespassed into the hutment where Lambani Tanda people are staying and beat a woman of Allibadi in Bijapur District on 26th January 1974 at 2330 hours and caused damage by pelting stones on the hutment. She and others being afraid of Malabari action escaped from there and spent the whole night in a jungle nearby. In this connection,an offence at Ambga Police Station Crime No. 2/74 under Sections 143, 147, 451, 527, 323 and 336, I.P.C. was registered on 27th January 1974 at 23-30 hours and caused damage by pelting stones on of this case arrested the accused persons. Protesting against these arrests by Ambga Police, the Malabaries started instigating other Labourers not to work and observed strike in all the audit sections and Sykes point of M/s. Thapar Intra-for Company of India Ltd., (TICIL) demanding protection from MCIL Company Management against the legal action of Police. They also prevented willing workers from attending to work in Sykes point and other places. As a consequence of frequent obstruction caused by Malabari workers to the willing workers,, seven cases at Ambga Police Station Crime Nos. 5/74 to 11/74 under Sections 143, 147, 341, 506 I.P.C. were registered. In